**<u>1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.</u>**

**<u>ಸಿ.ಸಿ. ಸಂಖ್ಯೆ:3860/2025 (ಪಿ.ಡಬ್ಲ್ಯೂ-1)</u>**

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 15.07.2026.**

**<u>ಮುಂದುವರೆದ ಮುಖ್ಯ ವಿಚಾರಣೆ : ಶ್ರೀ.ಕೆ.ಎನ್.ಆರ್. ಫಿರ್ಯಾದಿದಾರರ ಪರ ವಕೀಲರಿಂದ</u>**

ನಾನು ನನ್ನ ಮಗಳ ಸಂಬಳ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು **ನಿಪಿ-6** ಎಂದು ಗುರುತಿಸಲಾಯಿತು.

ನಾನು ಆಹಾರ ನಾಗರೀಕ ಸರಬರಾಜು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕರು ನೀಡಿದ ಪರವಾನಗಿ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು **ನಿಪಿ-7** ಎಂದು ಗುರುತಿಸಲಾಯಿತು.

ನಾನು ನನ್ನ ಮಗನ ಆದಾಯ ತೆರಿಗೆ ಸ್ವೀಕೃತಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು **ನಿಪಿ-8** ಎಂದು ಗುರುತಿಸಲಾಯಿತು.

ನನ್ನ ಖಾತೆಯ ಲೆಕ್ಕ ತಃಖ್ತೆಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು **ನಿಪಿ-9** ಎಂದು ಗುರುತಿಸಲಾಯಿತು.

ನಾನು ಮತ್ತೊಂದು ನನ್ನ ಖಾತೆಯ ಲೆಕ್ಕ ತಃಖ್ತೆಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು **ನಿಪಿ-10** ಎಂದು ಗುರುತಿಸಲಾಯಿತು.

ನಾನು ಇನ್ನೊಂದು ನನ್ನ ಖಾತೆಯ ಲೆಕ್ಕ ತಃಖ್ತೆಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು **ನಿಪಿ–11** ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ .ಎಸ್.ಪಿ.ವಿ. ಆರೋಪಿ ಪರ ವಕೀಲರಿಂದ**

ನಿಪಿ–1 ಚೆಕ್ಕಿಲ್ಲಿರುವ ಬರವಣಿಗೆ ಮತ್ತು ಸಹಿ ವ್ಯತ್ತಾಸದಿಂದ ಕೂಡಿವೆ ಎಂದರೆ ಆರೋಪಿಯೇ ಅವುಗಳನ್ನು ಬರೆದಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಎಸ್.ಬಿ.ಐ ಖಾತೆಯಲ್ಲಿ ದಿಃ 07.01.2025 ರಿಂದ ದಿಃ 10.03.2025 ರವರೆಗೆ ನನ್ನ ಖಾತೆಯಲ್ಲಿ ಕನಿಷ್ಟ ಪಕ್ಷ 20 ಸಾವಿರ ಹಣ ಇರಲಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ನನ್ನ ಖಾತಾ ಲೆಕ್ಕ ತಃಖ್ತೆಯಲ್ಲಿ ಒಂದೂವರೆ ಲಕ್ಷ ಮೇಲ್ಪಟ್ಟು ವ್ಯವಹಾರವಾಗಿಲ್ಲ ಮತ್ತು ಹಣವಿರಲಿಲ್ಲ ಎಂದರೆ ಸರಿ.

ನಿಪಿ–10 ಡಿಸಿಸಿ ಬ್ಯಾಂಕ್ ಖಾತಾ ಲೆಕ್ಕ ತಃಖ್ತೆಯಲ್ಲಿಯೂ ಸಹ ನಾನು ಹೇಳುವ ಹಾಗೆ ನನ್ನ ಖಾತೆಯಲ್ಲಿ 10 ಲಕ್ಷ ಹಣವಿರಲಿಲ್ಲ ಎಂದರೆ ಸರಿ. ನಿಪಿ–6 ನನಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ. ನಿಪಿ–8 ದಾಖಲೆಯು ಸಹ ನನಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ. ನನಗೆ ನಿಪಿ–9 ರಂತೆ ಎಲ್.ಐ.ಸಿ ಯಿಂದ ರಿನಿವಲ್ ಕಮಿಶನ್ ಬರುತ್ತಿದೆ ಎಂದು ನುಡಿಯುತ್ತಾರೆ. ನಿಪಿ–9 ರಂತೆ ಸಹ ದಿಃ 07.01.2025 ರಿಂದ ದಿಃ 10.03.2025 ರವರೆಗೆ 5 ಲಕ್ಷ ಮೇಲ್ಪಟ್ಟು ನನಗೆ ಹಣ ಬಂದಿಲ್ಲ ಎಂದರೆ ಸರಿ.

ನನ್ನ ಕುಟುಂಬದ ಮಾಸಿಕ ಖರ್ಚು 10 ಸಾವಿರ. ನನಗೆ ಬರುವ ಆದಾಯ ನನ್ನ ಕುಟುಂಬ ನಿರ್ವಹಣೆಗೆ ಸಾಕಾಗುವುದಿಲ್ಲ, ಹಾಗಾಗಿ ನಾನು ಆರೋಪಿಗೆ 10 ಲಕ್ಷ ಹಣ ನೀಡಲು ಆರ್ಥಿಕವಾಗಿ ಚೇತನವುಳ್ಳವರಾಗಿಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಯಾವುದೇ ವ್ಯಕ್ತಿಗೆ 10 ಲಕ್ಷ ಸಾಲ ನೀಡಿದಾಗ ಪ್ರನೋಟ್ ಬರೆಸಿಕೊಳ್ಳುವುದು ವಾಡಿಕೆ ಎಂದರೆ ಸರಿ. ನಾನು ಆರೋಪಿಯಿಂದ ಯಾವುದೆ ಪ್ರನೋಟ್ ಬರಿಸಿಕೊಂಡಿಲ್ಲ. ಆರೋಪಿಗೆ ನಾನು 10 ಲಕ್ಷ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಫಿರ್ಯಾದು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯ ಹೆಸರಿಗೆ ಪಹಣಿ ಇರುವುದನ್ನು ನಾನು ಪರಿಶೀಲನೆ ಮಾಡಿಲ್ಲ. ಆರೋಪಿಯ ಹೆಸರಿಗೆ ಇರುವ ಪಹಣಿಯನ್ನು ನಾನು ಹಾಜರುಪಡಿಸಲು ಸಾಧ್ಯವಿಲ್ಲ. ದೂರಿನಲ್ಲಿ ಹೇಳಿರುವಂತೆ ಆರೋಪಿಯು ವ್ಯವಸಾಯದ ಖರ್ಚುಗಳಿಗೆ ನನ್ನ ಬಳಿ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯು ತನಗೆ ಸೇರಿದ ಚೆಕ್ಕನ್ನು ಬರೆದು ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಚೆಕ್ಕನ್ನು ಆರೋಪಿಯು ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಅನಿತ ಮತ್ತು ವಿಶ್ವನಾಥ ರವರಿಂದ ಹಣ ಪಡೆದು, ಆರೋಪಿಗೆ ಹಣ ನೀಡಿದ್ದೆ ಎಂದು ನೋಟಿಸು, ಫಿರ್ಯಾದು ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. 10 ಲಕ್ಷ ದೊಡ್ಡ ಮೊತ್ತದ ಹಣವನ್ನು ಆರೋಪಿಗೆ ನೀಡಲು ನನಗೆ ಸಾಮರ್ಥ್ಯವಿಲ್ಲ ಎಂದರೆ ಸರಿಯಲ್ಲ.

ಪಿ.ಡಬ್ಲ್ಯು:1

ನಾನು ಸೋಮಶೇಖರ್ ಬಿನ್ ಜಾನಪ್ಪ ರವರೊಂದಿಗೆ ಶಾಮೀಲಾಗಿ ಈ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.